

## ಪೇಪರ್ ವಿನಾಯಕ

ಇಳಕಲ್ಲದ ವಿಜಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಬಸವರಾಜ ಗವಿಮಠ ಅವರು ವಿಘ್ನ ನಿವಾರಕನಾದ ವಿನಾಯಕನನ್ನು ವಿವಿಧ ಆಕಾರದಲ್ಲಿ ನಿರ್ಮಿಸುವುದರಲ್ಲಿ ಪರಿಣಿತರು. 1993ರಲ್ಲಿ ಮಣ್ಣಿನಿಂದ ಗಣೇಶನನ್ನು ತಯಾರಿಸಿ ತಮ್ಮ ಕಲಾ ಮಹಾ ವಿದ್ಯಾಲಯದಲ್ಲಿ ಗಣೇಶ ಚತುರ್ಥಿಯಂದು ಪ್ರದರ್ಶಿಸಿದರು. ಅಂದಿನಿಂದ ಇಂದಿನವರೆಗೆ ಪ್ರತಿವರ್ಷ ಗಣೇಶ ಮೂರ್ತಿಯನ್ನು ಬೇರೆ ಬೇರೆ ರೀತಿಯಾಗಿ, ಆಕಾರದಲ್ಲಿ ನಿರ್ಮಿಸುತ್ತಾ ಬಂದಿದ್ದಾರೆ. ತ್ಯಾಜ್ಯ ವಸ್ತುಗಳಿಂದ ಮೂರ್ತಿಯನ್ನು ತಯಾರಿಸುವ ಕಲೆಯನ್ನು ಕರಗತ ಮಾಡಿಕೊಂಡಿರುವ ಅವರು ವಿಶ್ವದ ವಿದ್ಯಮಾನವನ್ನು ವಿವರಿಸುವ ವರ್ತಮಾನ ಪತ್ರದ ವಿಶೇಷತೆಯನ್ನು ತಿಳಿಸಲು 2004ರಲ್ಲಿ ನ್ಯೂಸ್‌ಪೇಪರ್ ಗಣೇಶನನ್ನು ನಿರ್ಮಿಸಿ ಗಮನ ಸೆಳೆದಿದ್ದರು. ಅಂದಿನ ಅಪರೂಪದ ಚಿತ್ರವೇ ಇದು. ಕಸದ ನೆಲೆಯಲ್ಲಿ ರಸದ ಸೆಲೆಯನ್ನು ಚಿಮ್ಮಿಸುವ ಶಕ್ತಿ ಕಲೆಯಲ್ಲಿದೆ ಎಂಬುದಕ್ಕೆ ಇದರಿಂದ ಸಾಕ್ಷಿಯಾಗಿದೆ.

—ಬಸವರಾಜ ಹೂಗಾರ, ಇಳಕಲ್ಲ



## ನೇಪಥ್ಯಕ್ಕೆ ಸೇರಿದ ಏಕತಾರಿ

ಜಾನಪದ ವಾದ್ಯ ಪರಿಕರಗಳಲ್ಲಿ ಒಂದಾದ ಈ ಏಕತಾರಿ ವಾದ್ಯವು ಇಂದು ಅಪರೂಪವಾಗುತ್ತಿದೆ. ಮನೆಯಿಂದ ಮನೆಗೆ ಸಾಂಪ್ರದಾಯಿಕ ಹಾಡುಗಳನ್ನು ತತ್ವ ಪದಗಳನ್ನು ಹಾಡುತ್ತಾ ಸಾಗುವ ಬುಡಕಟ್ಟು ಸಮುದಾಯಗಳ ಪ್ರತಿನಿಧಿಯಾಗಿ ಈ ಏಕತಾರಿ ವಾದ್ಯವು ಜೋಗಿ ಜನಾಂಗದ ಮುಖವಾಣಿಯಾಗಿದೆ. ಸೋರೆ ಬುರುಡೆಗೆ ಬಿದಿರಿನ ಕೋಲು ಕಟ್ಟಿ, ಅದಕ್ಕೆ ನಾದ ಹೊಮ್ಮುವ ತಂತಿಗಳನ್ನು ಬಿಗಿದರೆ ಈ 'ಏಕತಾರಿ' ವಾದನದ ಸ್ವರಗಳನ್ನು ಮೀಟಬಹುದು. ಆಧುನಿಕತೆಯ ಭರಾಟೆಯಲ್ಲಿ ಈ ನಾದದ ಅಬ್ಬರವೂ ಕಡಿಮೆಯಾಗಿರುವುದು ಆತಂಕಕ್ಕೆ ಕಾರಣ.

—ದತ್ತಾತ್ರೇಯ ಭಟ್ಟ, ಕಣ್ಣಿಪಾಲ

## ಅಲೆ ಅಲೆಯಾಗಿ ಶಿವನ ತಲೆ ಮೇಲೆ ಗಂಗೆ

ಗಂಗಾಧರೇಶ್ವರ ಎನ್ನುವ ಹೆಸರನ್ನು ಅನ್ವರ್ಥವಾಗುವಂತೆ ಶಿಲ್ಪಿ ಈ ಚಿತ್ರದಲ್ಲಿ ಕಾಣುತ್ತಿರುವ ಲಿಂಗದ ಮೂಲಕ ಅಭಿವ್ಯಕ್ತಪಡಿಸಿದ್ದಾನೆ. ಲಿಂಗರೂಪಿಯಾದ ಈಶ್ವರನ ತಲೆಯ ಮೇಲೆ ಗಂಗೆಯಿದ್ದು, ಅಲೆ ಅಲೆಯಾಗಿ ನೀರು ಹರಿಯುವಂತೆ ಕೆತ್ತಿದ್ದಾನೆ. ಇದೊಂದು ಅಪರೂಪ ಹಾಗೂ ವಿಶಿಷ್ಟವಾದದ್ದು. ತುರುವೇಕೆರೆಯ ಗಂಗಾಧರೇಶ್ವರ ದೇವಸ್ಥಾನದಲ್ಲಿ ನಾವು ಕಾಣಬಹುದು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

